ಎಂ.ಪಿ. ಬಸಪ್ಪ.—ಸ್ವಾಮಿ, ನಾನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ, ಏನು ಕ್ರಮ ವನ್ನು ತುಕೊಳ್ಳುತ್ತೀರೋ ತೆಗೆದುಕೊಳ್ಳಿ. ಲೈಸನ್ಸ್‌ನ್ನು ಒಂದಲ್ಲ ಇಬ್ಬರು ಮೂವ್ವರಿಗೆ ಕೊಟ್ಟಿದ್ದಾರೆ. ಸ್ವಾಮಿ ಬಿಳಿಗಿರಿ ರಂಗನ ಬೆಟ್ಟದಲ್ಲಿ ಕಪ್ಪು ಮಣ್ಣನ್ನು ಅಗೆಯುವ ಬಗ್ಗೆ ಈ ನೋಟಿಫಿಕೇಷನ್ ಹೊರಡಿಸಿಕ್ಕಿಂತ ಮುಂಚಿತವಾಗಿ ೧೦ ಅಪ್ಲಿಕೇಷನ್‌ಗಳನ್ನು ಕೊಟ್ಟಿದ್ದಾರೆ. ಆದರೆ ಅದು ಪಾರೆಸ್ಟ್ ಏರಿಯಾ ರುವುದರಿಂದ ಅಲ್ಲಿ ಆನೆ ಮುಂತಾದ ಪ್ರಾಣಿಗಳು ಇವೆ. ಅಲ್ಲಿ ಬ್ಲಾಸ್ಟಿಂಗ್ ಮಾಡುವುದರಿಂದ ಅವಕ್ಕೆ ತೊಂದರೆಯಾಗುತ್ತದೆ. ಈಗ ಒಬ್ಬರು ಪ್ರೈವೇಟ್ ಪಾರ್ಟಿಯವರು ತಮ್ಮ ಪ್ರಭಾವವನ್ನು ಸರ್ಕಾರದ್ಮೇಲೆ ಬೀರಿ ಅಲ್ಲಿ ಮಣ್ಣನ್ನು ಅಗಿಯುವುದಕ್ಕೆ ಲೈಸನ್ಸ್‌ನ್ನು ಕೊಡುವ ಬಗ್ಗೆ ನಿಮ್ಮ ಅಲಾಪೆಯವರು ಶಿಪಾರಸ್ಸು ಮಾಡಿದ್ದಾರೆ ಅದು ಏನಾದರೂ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಮಾದೇಗೌಡ.—ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಕಾನೂನು ಪ್ರಕಾರ ಕೊಡುವುದಕ್ಕುರುವುದಿಲ್ಲ. ಅವರು ಶಿಪಾರಸ್ಸು ಮಾಡಿರಬಹುದು ಆದರೂ ಕೊಡಂವುದಕ್ಕೆ ಬರುವುದಿಲ್ಲ. ನ್ಯ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೆನೆ. ಆಕಸ್ಮಾತ್ ಅಧಿಕಾರಿಗಳ ಮಟ್ಟದಲ್ಲಿ ಅದು ಆಗ್ಬರೂ ಸಹ. ಆ ರೀತಿಯಾಗಿ ಕೊಡುವುದಕ್ಕೆ ಬರುವುದಿಲ್ಲ, ಆ ರೀತಿ ಏನಾದರೂ ಮಾಡಿದ್ದರೆ ಅಂಥವರ್ಮೇಲೆ ಕ್ರಾರ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಬಸಪ್ಪ.—ತಾವು ಹೊರಡಿಸಿರತಕ್ಕ ನೋಟಿಫಿಕೇಶನ್ ಪ್ರಕಾರವಾಗಿ ಲೈಸನ್ಸ್ ಕೊಡುವುದಕ್ಕೆ ಬರುವದಿಲ್ಲ ಎನ್ನುವುದು ನನಗೂ ಅರ್ಥವಾಗುತ್ತದೆ. ಆದರೆ ಬಿ.ಆರ್. ಹಿಲ್ಸ್‌ನಲ್ಲಿ ಪ್ರೈವೇಟ್‌ನವಗೆ ಲೆಸನ್ಸ್ ಕೊಡಬಾರದೆಂದಿದ್ದರೂ ಸಹ ಪ್ರೈವೇಟ್ ಪಾರ್ಟಿಯವರಿಗೆ ಕೊಡಬಹುದೆಂದು ನಿಮ್ಮಇಲಾಖೆಯವರು ಶಿಪಾರಸ್ಸು ಮಾಡಿದ್ದಾರೆಂದು ನಾನು ಸ್ಪೆಸಿಫಿಕ್ ಆಗಿ ಹೇಳುತ್ತಿದ್ದೇನೆ. ದುದರಿಂದ ನರಗ್ಗೆ ಸರ್ಕಾರ ಸ್ಪಷ್ಟವಾಗಿ ಕೊಡುವುದಿಲ್ಲ ಎನ್ನತಕ್ಕಂಥ ಕೆಟಗಾರಿಕಲ್ ಆಶ್ಯೂರೆನ್ಸ್‌ನ್ನು ಕೊಡುತ್ತದೆಯೆ ಸ್ವಾಮಿ?

ಶ್ರೀ ಜಿ.ಮಾದೇಗೌಡ.—ಖಂಡಿತವಾಗಿಯೂ ಕೊಡುವುದಿಲ್ಲ, ನನ್ನ ಮಾತಿನ ಮೇಲೆ ನಂಬಿಕೆ ಇಟ್ಟುಕೊಳ್ಳಿ.

ಅಧ್ಯಕ್ಷ.—ಶ್ರೀ ಸಿ. ರುದ್ರಪ್ಪ ಪ್ರಶ್ನೆ ನಂ. ೪೬—ಮಂತ್ರಿಗಳವರು ಇಲ್ಲ ಆದುರಿಂದ ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Demnd, Collection and Balance of the Major Municipalities in the Stte.

590. SRI S. SHAFI AHMED (Tumkur).—Will the Minister for Housing and Urban Development be pleased to state :—

what is the demand, collection and balance (DCB) of the major Municipalities in the State for the last one year upto June 1980 ?

SRI DHARAM SINGH NARAYANA SINGH (Minister for Housing and Urban Development).—

The demand, collection and balance (DCB) of the major municipalities in the State upto June 1980 is given below:—

Name of the Municipality	Demand in Rs. P.	Collection in Rs. P.	Balance in Rs, P.
1	2	3	4
1 Mandya	32,89,270-13	12,72,436-46	20,16,833-67
2 Hassan	14,22,316-13	5,96,912-35	8,25,403-78
3 Shimoga	1,67,83,575-71	1,09,41,881-78	58,41,693-93
4 Davangere	1,21,84,689-00	59,75,344-00	62,09.345-00
5 Tumkur	50,01,918-96	17,55,448-08	32,46,470-88
6 Gulbarga	3,00,16,851-57	1,50,27,340-53	2.37,79,511-04
7 Bellary	3,29,63.422-99	1,14 23 862-31	2,15,39,561-68
8 Bidar	2,51,11,303-32	1,19,95,559-72	1,31,15,743-61
9 Raichur	3,13,16,372-92	1'87,64,164-22	1,25,52,208-70
10 Hospet	2,74,23,926-96	1,22,14,864-06	1,52 09,062-90
11 Gadag-Betgeri	13,92,251-00	10,85,725-00	3,10,526_00
12 Bijapur	28,64,126-00	20,55,613-00	8,08,513-00
13 Bagalkot	15,39.963-00	9,78,964-00	5,60,999-00

MR. SPEAKER.—On behalf of the Hon. Member Sri Shafi Ahmed I put that question. If any Hon. member is interested, he can ask questions.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಪ್ರಶ್ನೆ ಕೇಳಿದ ಮೇಲೆ ನಾವು ಕೇಳದೇ ಇರುವುದಕ್ಕೆ ಆಗುವುದಿಲ್ಲ. ಇಷ್ಟೊಂದು ಟ್ಯಾಕ್ಸ್ ವಸೂಲಿ ಆಗಬೇಕಾಗಿದ್ದರೂ ಸರ್ಕಾರ ಏತಕ್ಕೆ ಇದುವರೆಗೆ ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಬಹುತೇಕವಾಗಿ ಎಲ್ಲಾ ಮುನಿಸಿಪಾಲಿಟಿಗಳಲ್ಲಿಯೂ ಸರ್ಕಾರದವರ ಹಶದಲ್ಲಿವೆ, ಅಲ್ಲಿಗೆ ಅಡ್ಮಿನಿಸ್ಟ್ರೇಟರ್‌ಗಳನ್ನು ಹಾಕಿದ್ದೀರಿ, ಆದರೂ ಸಹ ಏತಕ್ಕೆ ವಸೂಲಿಗೆ ತಕ್ಕ ಕಾರ್ಯಕ್ರಮವನ್ನು ಕೈಗೊಂಡಿಲ್ಲ ?

† ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ಈಗ ಇದರಲ್ಲಿ ಸ್ವಲ್ಪ ಇಂಪ್ರೂವ್ ಮಾಡಿದ್ದೇವೆ, ಎಲ್ಲೆಲ್ಲಿ ಸರಿಯಾಗಿ ವಸೂಲಿ ಆಗಿಲ್ಲ ಅಲ್ಲೆಲ್ಲಾ ವಸೂಲಿ ಮಾಡುವ ಬಗ್ಗೆ ಆದೇಶ ಕೊಟ್ಟಿದ್ದೇವೆ. ತಾವು ಹೇಳಿದ ಹಾಗೆ ಅಡ್ಮಿನಿಸ್ಟ್ರೇಟರ್‌ಗಳಿದ್ದಾರೆ ಅವರಿಗೂ ಸಹ ಸ್ಪಿಕ್ಟ್ ಆಗಿ ವಸೂಲಿ ಮಾಡುವ ಬಗ್ಗೆ ಆದೇಶ ಕೊಟ್ಟಿದ್ದೇವೆ. ಮತ್ತೆ ನಾವು ಎಲ್ಲೆಲ್ಲಿ ಅಡ್ಮಿನಿಸ್ಟ್ರೇಟರ್‌ಗಳನ್ನು ಹಾಕಿದ್ದೇವೆ ಅವರಿಗೆ ಅಡಿಷನಲ್ ಚಾರ್ಜಸ್ ಬೇರೆ ಇದೆ ಅದಕ್ಕೆ ನಾವು ಈಗ ಫುಲ್ ಟೈಮ್ ಅಡ್ಮಿನಿಸ್ಟ್ರೇಟರ್‌ಗಳನ್ನೇ ಹಾಕುತ್ತಿದ್ದೇವೆ. ಈಗಾಗಲೇ ಕೆ.ಜಿ.ಎಫ್. ಮತ್ತು ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ಫುಲ್ ಟೈಮ್ ಅಡ್ಮಿನಿಸ್ಟ್ರೇಟರ್‌ಗಳನ್ನೇ ಹಾಕಿದ್ದೇವೆ. ಮತ್ತೆ ಎಲ್ಲೆಲ್ಲಿ ಸರಿಯಾದ ವಸೂಲಿ ಆಗುತ್ತಿಲ್ಲ ಅಂಥಾ ಕಡೆಗಳಲ್ಲೆಲ್ಲಾ ಸರಿಯಾಗಿ ವಸೂಲಿ ಮಾಡುವ ಬಗ್ಗೆ ಆದೇಶ ಹೊರಡಿಸಿದ್ದೇವೆ.

ಶ್ರೀ ಹೆಚ್.ಡಿ. ದೇವೇಗೌಡ.—ಇಂಥಿಂಥ ಮುನಿಸಿಪಾಲಿಟಿಗಳಲ್ಲಿ ಇಷ್ಟಿಷ್ಟು ಹಣ ಬಾಕಿ ಇದೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇಪತ್ತಿನ ದಿವಸ, ಆಕ್ಟ್ರಾಯಿಯನ್ನು ರದ್ದು ಮಾಡಿದ ಮೇಲೆ ಮುನಿಸಿಪಾಲಿಟಿಯವರು ತಮ್ಮ ದೈನಂದಿನ ವ್ಯವಹಾರಗಳನ್ನು ನಡೆಸಿಕೊಳ್ಳುವುದಕ್ಕೆ ಅವರಿಗೆ ಸಂಪನ್ಮೂಲಗಳು ಇಲ್ಲದಂತಾಗಿದೆ. ಆದ್ದರಿಂದ, ಬಾಕಿ ಇರುವ ಹಣ ವಸೂಲಾಗುವುದಕ್ಕೆ ಸಾಧ್ಯವಿದೆಯೆ ? ಅದನ್ನು ವೇವ್ ಮಾಡುವುದಕ್ಕೆ ಸಾಧ್ಯವಿಲ್ಲವೆ? ಆಕ್ಟ್ರಾಯಿಯನ್ನು ರದ್ದು ಮಾಡಿದ ಮೇಲೆ ಅಲ್ಲಿನ ನೌಕರರಿಗೆ ಸಂಬಳವನ್ನು ಕೂಡ ಕೊಡುತ್ತಿಲ್ಲ. ಆಡಳಿತಾಧಿಕಾರಿಗಳು ಇರತಕ್ಕ ಪುರಸಭೆಗಳಾಗಲೀ

ಅಥವಾ ಖಾಸಗೀ ವ್ಯಕ್ತಿಗಳು ಆಡಳಿತ ಇರತಕ್ಕ ಪುರಸಭೆಗಳಾಗಲಿ ಅವುಗಳಿಂದ ಹಣ ವಸೂಲ್ಮಾಡುವುದಕ್ಕೆ ಹಾಗೆ ಸಾಧ್ಯ ಇದೆ ? ಮನೆಗಂದಾಯವನ್ನು ಒಂದು ಬಿಟ್ಟರೆ ಅವರಿಗೆ ಬೇರೆ ಯಾವ ಸಂಪನ್ಮೂಲಗಳೂ ಇಲ್ಲ.

(ಉತ್ತರ ಇಲ್ಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿರುವಂತೆ ಗುಲ್ಬರ್ಗ ಪುರಸಭೆಯಲ್ಲಿ ೨ ಕೋಟಿಗೂ ಹೆಚ್ಚು ಬಾಕಿ ಇದೆ. ಇದೇ ರೀತಿ ಮುನಿಸಿಪಾಲಿಟಿಗಳು ಇದ್ದರೆ ವಸೂಲಿ ಕಾರ್ಯ ಆಗುವುದಿಲ್ಲ. ಆದ್ದರಿಂದ ಕೂಡಲೇ ಚುನಾವಣೆ ಮಾಡಿ ಜನರ ಕೈಯಲ್ಲಿ ಅಧಿಕಾರ ಕೊಟ್ಟರೆ ವಸೂಲಿ ಆಗಬಹುದು. ಆದಕಾರಣ ಆ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಎಲ್ಲೆಲ್ಲಿ ಆಡಳಿತಾಧಿಕಾರಿಗಳು ಇದ್ದಾರೆ ಅಲ್ಲಿ ವಸೂಲಾಗುತ್ತಿಲ್ಲವೆಂದು ಅಲ್ಲ. ಸರ್ವೇ ಸಾಮಾನ್ಯವಾಗಿ ಎಲ್ಲ ಕಡೆಯೂ ಬಾಕಿ ಇದೆಯೆಂಬುದು ನಾನು ಇನ್ಸ್‌ಪೆಕ್ಷನ್ ಮಾಡಿದಾಗ ಗೊತ್ತಾಯಿತು. ಸರ್ಕಾರದ ವತಿಯಿಂದಲೇ (ಅನೇಕ ಇಲಾಖೆಗಳ ಕಡೆಯಿಂದ) ಬರತಕ್ಕ ಹಣ ಇದೆ. ಆದಕ್ಕೆಲ್ಲ ಮುನಿಸಿಪಾಲಿಟಿಗಳ ಕಡೆಯಿಂದ ನೋಟೀಸ್ ಕೊಡಲಾಗಿದೆ. ವಸೂಲಿಯನ್ನು ಬಿಗಿಯಾಗಿ ಮಾಡಬೇಕೆಂದು ಕೂಡ ಮುನಿಸಿಪಾಲಿಟಿಗಳಿಗೆ ಆದೇಶ ಕೊಟ್ಟಿದ್ದೇವೆ.

Sri K. Bhaskar Naidu.—With all these efforts of collection and other things, the Municipalities have come to default. Is the Government contemplating again to revive the Octroi ?

ಶ್ರೀ ಧರ್ಮಸಿಂಗ್.—ಆದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಾಮಾನ್ಯವಾಗಿ ಆಡಳಿತಾಧಿಕಾರಿಗಳು ಇದ್ದ ಕಡೆ ಹೆಚ್ಚಾಗಿ ಬಾಕಿ ವಸೂಲಾಗುತ್ತದೆಂಬುದು ಒಂದು ನಂಬಿಕೆ. ಆದರೆ, ಆಡಳಿತಾಧಿಕಾರಿಗಳು ಇದ್ದರೂ ಕೂಡ ವಸೂಲಾಗುತ್ತಿಲ್ಲವೆಂದರೆ ಅಂಥ ಕಡೆ ಬಹು ಬೇಗ ಚುನಾವಣೆ ಮಾಡುತ್ತಾರೆಂದು ನಾವು ನಿರೀಕ್ಷಣೆ ಮಾಡಬಹುದೆ ?

ಶ್ರೀ ಧರ್ಮಸಿಂಗ್.—ಚುನಾವಣೆ ಮಾಡಬೇಕೆಂಬುದು ಕೂಡ ಸರ್ಕಾರದ ಮನಸ್ಸಿನಲ್ಲಿ ಇದೆ. ಆದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಜಿ. ರಾಮದೇವ್.—ಇಲ್ಲಿ ಕೇಳಿರತಕ್ಕ ಪ್ರಶ್ನೆ ಏನೆಂದರೆ ರಾಜ್ಯದ ಪ್ರಧಾನ ಮುನಿಸಿಪಾಲಿಟಿಗಳ ೧೯೮೦ರ ಜೂನ್ ತಿಂಗಳವರೆಗಿನ ಒಂದು ವರ್ಷದ ಬೇಡಿಕೆ, ವಸೂಲಿ ಪಡತ್ತ ಬಾಕಿ ಇರುವ ಹಣ ಎಷ್ಟು ಎಂಬುದು. ಇದಕ್ಕೆ ತಮ್ಮ ಉತ್ತರದಲ್ಲಿ ೧೯೮೦ನೇ ಜೂನ್ ಅಂತ್ಯದವರೆಗೆ ಎಂದು ಇದೆ. ಅಂದರೆ ಒಂದು ವರ್ಷದ್ದೇ ಅಥವಾ ಇದುವರೆಗೆ ಇರತಕ್ಕ ಬಾಕಿಯೆ?

ಶ್ರೀ ಧರ್ಮಸಿಂಗ್.—ಮೊದಲಿನಿಂದಲೂ ಬಾಕಿ ಇದೆ.

ಶ್ರೀ ಎ.ಜಿ ಕೊಡಗಿ.—ಆಡಳಿತಾಧಿಕಾರಿಗಳು ಇದ್ದೂ ಕೂಡ ಇಷ್ಟೊಂದು ಬಾಕಿ ಇಡೆ. ಮುನಿಸಿಪಾಲಿಟಿಗಳಲ್ಲಿ ಸಂಬಳ ಸಾರಿಗೆ ಕೊಡಲಿಕ್ಕೆ ಹಣ ಇಲ್ಲವೆಂದರೆ ಇದಕ್ಕೆ ರಾಜಕೀಯ ಕಾರಣವೋ ಅಥವಾ ಚುನಾವಣೆ ಆಗುವವರೆಗೆ ವಸೂಲ್ಮಾಡಕೂಡದು ಎಂಬ ಕಾರಣ ಏನಾದರೂ ಇದೆಯೇ?

Mr. Speaker.—Your question should help for the recovery.

ಶ್ರೀ ಎ.ಜಿ. ಕೊಡಗಿ.—ಆಡಳಿತಾಧಿಕಾರಿಗಳು ಇನ್ನೂ ಕೂಡ ಏಕೆ ವಸೂಲ್ಮಾಡಿಲ್ಲ ? ಇಷ್ಟು ಇಷ್ಟು ಬಾಕಿ ಇದ್ದು ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿ ಬಹಳ ಕಷ್ಟದಲ್ಲಿದ್ದರೂ ಕೂಡ ಏಕೆ ಇದುವರೆಗೆ ಹಣವನ್ನು ವಸೂಲ್ಮಾಡಿಲ್ಲ ?

(ಉತ್ತರ ಇಲ್ಲ)

ಶ್ರೀ ಎಂ.ಸಿ. ನಾನಯ್ಯ.—ಈಗ ಮುನಿಸಿಪಾಲಿಟಿಗಳಲ್ಲಿ ಪಾರ್ಟ್-ಟೈಂ ಅಡ್ಮಿನಿಸ್ಟ್ರೇಟರುಗಳು ಏನು ಇದ್ದಾರೆ ಅವರನ್ನೆಲ್ಲಾ ಫುಲ್ ಟೈಂ ಅಡ್ಮಿನಿಸ್ಟ್ರೇಟರುಗಳನ್ನಾಗಿ ಮಾಡಿದರೆ ವಸೂಲಿ ಕಾರ್ಯ ಚೆನ್ನಾಗಿ ನಡೆಯುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು.

ಅಧ್ಯಕ್ಷರು.—ಕೆಲವು ಕಡೆ ಜಿಲ್ಲಾಧಿಕಾರಿಗಳು ಅಡ್ಮಿನಿಸ್ಟ್ರೇಟರ್ ಆಗಿ ಆಡಿಷನಲ್ ಚಾರ್ಜ್ ಹೊಂದಿರುತ್ತಾರೆ.

ಶ್ರೀ ಎಂ.ಸಿ. ನಾನಯ್ಯ.—ನಮ್ಮ ಮಡಿಕೇರಿ ಅಸಿಸ್ಟೆಂಟ್ ಕಮೀಷನರ್‌ರವರಿಗೆ ೬ ಚಾರ್ಜ್‌ಗಳು ಇವೆ. ಒಟ್ಟಿನಲ್ಲಿ. ಈಗಲಾದರೂ ಮುನಿಸಿಪಾಲಿಟಿಗಳಿಗೆ ಚುನಾವಣೆ ನಡೆಸುತ್ತೇವೆಂದು ಹೇಳುವ ತೀರ್ಮಾನಕ್ಕೆ ಬಂದಿದ್ದೀರಾ ?

ಶ್ರೀ ಧರ್ಮಸಿಂಗ್.—ನಾವು ಹೋಗಿ ಇನ್ಸ್‌ಪೆಕ್ಷನ್ ಮಾಡಿದಾಗ ಎಲ್ಲೆಲ್ಲಿ ಆಡಿಷನಲ್ ಡ್ಯೂಟಿ ಗಳನ್ನು ಹೊಂದಿದ ಅಡ್ಮಿನಿಸ್ಟ್ರೇಟರುಗಳು ಇದ್ದು ವಸೂಲಿ ಕಾರ್ಯ ಸರಿಯಾಗಿ ಆಗುತ್ತಿಲ್ಲವೆಂದು ಕಂಡು ಬಂತೋ ಮತ್ತು ಯಾವ ಕಡೆ ಕೆಲಸ ಕಾರ್ಯ ಸರಿಯಾಗಿ ಆಗಿಲ್ಲವೆಂದು ದೂರು ಬಂದಿದೆಯೋ ಅಂಥ ಕಡೆಗಳಲ್ಲೆಲ್ಲ ಫುಲ್ ಟೈಂ ಅಡ್ಮಿನಿಸ್ಟ್ರೇಟರುಗಳನ್ನು ಮಾಡಿದ್ದೇವೆ. ವಿಶೇಷವಾಗಿ ಬಹಳಷ್ಟು ಇಲಾಖೆಗಳಿಂದ ಬಾಕಿ ವಸೂಲಾಗಬೇಕಾಗಿದೆ. ನಾನಾ ಕಾರಣಗಳಿಂದ ಅದು ಇನ್ನೂ ಬಂದಿಲ್ಲ. ಅವರಿಗೆ ಕೂಡ ನೋಟೀಸ್ ಕೊಟ್ಟಿದ್ದೇವೆ, ಮತ್ತು ಅದರ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದೇವೆ.

SRI A. LAKSHMI SAGAR.—This statement refers to the Demand, Collection and Balance, and therefore, it refers to arrears. Are there any items of irrecoverable arrears which have become time barred, and if so, what is the total amount involved?

MR. SPEAKER.—Please put a separate question. Now the question hour is over.

QUESTIONS FOR ANSWER'S ON THE DAY

(but not taken up)

Misappropriation in the Mamadapur Village Seva Co-operative Society

202. SRI L.S. NAIK (Gokak).—Will the Minister for Co-operation be pleased to state.—

(a) whether it is a fact that a sum of Rs. 75.000 was misappropriated during the year 1978-79 in Mamadapur Village Service Co-operative Society in Gokak taluk ;

(b) the persons who have misappropriated this amount ;

(c) whether the accounts have been audited or not ?

SRI H.C. SRIKANTAIAH (Minister for Co-operation).—

(a) Since the accounts of Mamadapur Village Service Co-operative Society Limited of Gokak taluk for the year 1978-79 has not been audited so far, it is not possible to state at this juncture that the amount of this society has been misappropriated ;

(b) Since the accounts have not been audited, it is not possible to state the No. of persons who have misappropriated the amount.